ನ್ಯಾಯಾಧೀಶ ಮತ್ತು ತಾಲೂಕು ಕಾನೂನು ಉಪಸ್ಥಿತರಿದ್ದರು.

ಅಧ್ಯಕ್ಷ ಎನ್.ಟಿ. ಗಾಂವ್ಕಾರ,ಕಕ್ಷಿದಾರರಿಗೆ ಶೀಘ್ರ ನ್ಯಾಯದಾನ ಒದಗಿಸಲು ಇನ್ನೂ ಹೆಚ್ಚು ಹೆಚ್ಚು ಲೋಕ ಅದಾಲತ್ ಅಗತ್ಯವಾಗಿದೆ ಎಂದರು.

# ಕೆರೆಗಳ ಸಂರಕ್ಷಣಾ ವಿಧಾನ ಶಿಥಿಲಾವಸ್ಥೆಗೆ

ಶಿರಸಿ,ಮಾ.16: ನಮ್ಮ ದೇಶದ ಕೆರೆಗಳ ಇತಿಹಾಸ ರೋಮಾಂಚಕಾರಿಯಾಗಿವೆ. ಸುಮಾರು 71 ಸಂರಕ್ಷಣಾ ವಿಧಾನಗಳು ಇದ್ದವು. ಇಂದು ಅವೆಲ್ಲವೂ ಶಿಥಿಲವಾಗಿವೆ ಎಂದು ಪ್ರೊ.ನಾರಾಯಣ ಶೆಣೈ ಹೇಳಿದರು.

ಶ್ರೀಸ್ವರ್ಣವಲ್ಲಿಮಠದಸುಧರ್ಮ ಸಭಾಂಗಣದಲ್ಲಿ ಗ್ರಾಮಾಭ್ಯುದಯ ಸಮಿತಿ, ಗ್ರಾಮ ಅರಣ್ಯ ಸಮಿತಿ ಅಗಸಾಲ ಬೊಮ್ಮನಳ್ಳಿ, ವೃಕ್ಷಲಕ್ಷ ಆಂದೋಲನ, ಭಾರತೀಯ ವಿಜ್ಞಾನ ಮಂದಿರ, ಪರಿಸರ ಅಧ್ಯಯನ ಕೇಂದ್ರ ಮೊದಲಾದ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಲಾಗಿದ್ದ, ಕೆರೆ ಸಂರಕ್ಷಣೆ ಕುರಿತು ರಾಜ್ಯ ಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

1960 ರಲ್ಲಿ ದೇಶದಲ್ಲಿ ಜಲಕ್ಷಾಮ ಇರಲಿಲ್ಲ, ನಲ್ಲಿಗಳ ಮುಖಾಂತರ ನೀರು ಪೂರೈಸುವ ವಿಧಾನ ಪ್ರಾರಂಭವಾದ ನಂತರ ಕೆರೆಗಳ ಇನ್ನಿತರ ವಿಧಾನಗಳ ಅವನತಿ ಪ್ರಾರಂಭವಾಯಿತು. ದೇಶದಲ್ಲಿ ಶೇ.30 ರಿಂದ 40 ರಷ್ಟು ಕೆರೆಗಳನ್ನು ಸಾಮಾನ್ಯ ಜನರು ನಿರ್ಮಿಸಿದ್ದಾರೆ. ಕೆರೆ ನಿರ್ಮಿಸುವ ಮೂಲಕ ನೀರು ಸಮೃದ್ಧವಾಗಿರುವಂತೆ ಮಾಡಿದ್ದರು ಎಂದು ಹೇಳಿದರು.

ವಿಜ್ಞಾನಿ ಟಿ.ವಿ. ರಾಮಚಂದ್ರ, ರಾಜ್ಯದಲ್ಲಿ ಸುಮಾರು 40 ಸಾವಿರ ಕೆರೆಗಳಿವೆ. ನೀರಿನ ಕ್ಷಾಮ ನೀಗಿಸಲು ಅನೇಕ ವಿಧಾನಗಳು ಇಲ್ಲಿವೆ. ತೆಲುಗು ಗಂಗಾ ಯೋಜನೆ ನಿರೀಕ್ಷಿತ ಯಶಸ್ಸನ್ನು ಪಡೆದಿಲ್ಲ. ಅನೇಕ ದೊಡ್ಡ ಯೋಜನೆಗಳಿಂದ ಚಿಕ್ಕ ಯೋಜನೆಗಳು ಕುಂಠಿತಗೊಂಡಿವೆ. ಅಲಕ್ಷಕ್ಕೆ ಒಳಗಾಗಿವೆ. ಕೆರೆಗಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯ ಆಗಬೇಕಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಪಶ್ಚಿಮಘಟ್ಟ ಕಾರ್ಯಪಡೆಯ ನಿಕಟಪೂರ್ವ ಅಧ್ಯಕ್ಷ ವೃಕ್ಷಲಕ್ಷ ಆಂದೋಲನದ ಅನಂತ ಹೆಗಡೆ ಅಶೀಸರ ಮಾತನಾಡಿ,ಮಲೆನಾಡು,ಬಯಲು ಸೀಮೆಗಳಲ್ಲಿ ಕೆರೆಗಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯ ನಡೆದಿದೆ. ಕೆರೆ ಸಮ್ಮೇಳನದ ಪೂರ್ವದಲ್ಲಿ ಕೆರೆಗಳ ಅಭಿಯಾನ ನಡೆಸಿ ಅವುಗಳ ಅಧ್ಯಯನ ಮಾಹಿತಿ ಸಂಗ್ರಹಿಸಲಾಗುತ್ತದೆ ಎಂದು ಹೇಳಿದರು.



ಸಾಗರದ ಸೇವಾಸಾಗರದ ಬಿ.ಎಚ್. ರಾಘವೇಂದ್ರ ಹಾಗೂ ಇತರರು ಉಪಸ್ಥಿತರಿದ್ದರು.

ರಾಜ್ಯದ ಅನೇಕ ಜಿಲ್ಲೆಗಳಿಂದ ಬಂದ ಪ್ರತಿನಿಧಿಗಳು, ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಕೆರೆಗಳನ್ನು ವೀಕ್ಷಣೆಗೆ ಮಾಡಿ, ಅಧ್ಯಯನ ನಡೆಸಿದರು.


ನಾರಾಯಣ ಹೆಗಡೆ ಗಡಿಕೈ ಸ್ವಾಗತಿಸಿದರು.

---

ಮಾಡಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಯಾರೊ ದೂರು ನೀಡಿದ ಹಿನ್ನೆಲೆಯಲ್ಲಿ ಮುಖ್ಯಾಧಿಕಾರಿಗಳು ಹಾಗೂ ಇಂಜನಿಯರ್‌ಗಳು ಮುಗದಮ್ ಕಾಲೋನಿಯ ಸ್ಥಳಕ್ಕೆ ಭೇಟಿ ನೀಡಿ ಶನಿವಾರ ಗಟಾರದ ನೀರು ಮುಂದೆ ಹರಿಯದಂತೆ ಬಂದ್ ಮಾಡಿದ್ದರು.

ವಿದೇಶಿಗರ ಪಡುವಲಿಕೆ:



ಗಟಾರ ನೀರು ಸರಾಗವಾಗಿ ಹರಿಯಲು ಅವಕಾಶ ಮಾಡಿಕೊಡಬೇಕೆಂದು ಆಗ್ರಹಿಸಿ ಭಟ್ಕಳದ ಮಗದಮ್ ಕಾಲೋನಿ ನಿವಾಸಿಗಳು ಪುರಸಭೆಗೆ ಮುತ್ತಿಗೆ ಹಾಕಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಸಾರ್ವಜ
ಪುರಸಭೆ ಉ
ಭರವಸೆಯಿಂ
ಪುರಸಭೆ ಸದ
ಉಪಸ್ಥಿತರಿದ್ದರ

---

# ಕೆರೆ ಸಂರಕ್ಷಣೆ: ರಾಜ್ಯ ಮಟ್ಟದ ಕಾರ್ಯಾಗಾರ

ಶಿರಸಿ : ಇಲ್ಲಿನ ಸ್ವರ್ಣವಲ್ಲಿ ಮಠದ ಸುಧರ್ಮ ಸಭಾಂಗಣದಲ್ಲಿ ಶನಿವಾರ ಕೆರೆ ಸಂರಕ್ಷಣೆ ಕುರಿತು ರಾಜ್ಯ ಮಟ್ಟದ ಕಾರ್ಯಾಗಾರ ನಡೆಯಿತು.

ಕಾರ್ಯಾಗಾರ ಉದ್ಘಾಟಿಸಿದ ಪ್ರೊ. ನಾರಾಯಣ ಶಣೈ ಮಾತನಾಡಿ, ನೀರು ಸಮೃದ್ಧವಾಗಿರುವ ನಿಟ್ಟಿನಲ್ಲಿ ಕೆರೆಗಳನ್ನು ಕಾಪಾಡಿಕೊಳ್ಳುವ ಅಗತ್ಯವಿದೆ. 1960ರವರೆಗೆ ದೇಶದಲ್ಲಿ ಇಷ್ಟೊಂದು ಪ್ರಮಾಣದ ಜಲ ಕ್ಷಾಮ ಇರಲಿಲ್ಲ, ನಲ್ಲಿಗಳ ಮುಖಾಂತರ ನೀರು ಪೂರೈಸುವ ವಿಧಾನದಿಂದಾಗಿ ಕೆರೆಗಳ ಅವನತಿ ಪ್ರಾರಂಭವಾಗಿದೆ. ಕೆರೆಗಳ ಇತಿಹಾಸ ರೋಮಾಂಚನ ಕಾರಿಯಾಗಿದೆ. ದೇಶದ ಶೇ.40 ರಷ್ಟು ಕೆರೆಗಳು ಸಾಮಾನ್ಯ ಜನರಿಂದಲೇ ನಿರ್ಮಾಣಗೊಂಡಿವೆ ಎಂದರು.

ವಿಜ್ಞಾನಿ ಟಿ.ವಿ. ರಾಮಚಂದ್ರ ಮಾತನಾಡಿ, ಅನೇಕ ದೊಡ್ಡ ಯೋಜನೆಗಳಿಂದ ಚಿಕ್ಕ ಯೋಜನೆಗಳು ಕುಂಠಿತಗೊಂಡಿವೆ. ರಾಜ್ಯದಲ್ಲಿ ಸುಮಾರು 40 ಸಾವಿರ ಕೆರೆಗಳಿವೆ. ಕೆರೆಗಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯವಾಗಬೇಕಿದೆ. ಮುಂಬರುವ ದಿನಗಳಲ್ಲಿ ದೇಶ ಮಟ್ಟದಲ್ಲಿ ಕೆರೆ ಸಮ್ಮೇಳನ ನಡೆಸಲು ಉದ್ದೇಶಿಸಲಾಗಿದೆ ಎಂದರು.


ಪಶ್ಚಿಮ ಘಟ್ಟ ಕಾರ್ಯಪಡೆಯ ಮಾಜಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ, ಸೇವಾ ಸಾಗರದ ಬಿ.ಎಚ್. ರಾಘವೇಂದ್ರ, ನಾರಾಯಣ ಹೆಗಡೆ ಗಡಿಕೈ ಇತರರು ಇದ್ದರು.



ಶಿರಸಿ ತಾಲೂಕಿನ ಸ್ವರ್ಣವಲ್ಲಿ ಮಠದ ಸುಧರ್ಮ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಕೆರೆ ಸಂರಕ್ಷಣೆ ಕುರಿತ ಕಾರ್ಯಾಗಾರವನ್ನು ಪ್ರೊ. ನಾರಾಯಣ ಶಣೈ ಉದ್ಘಾಟಿಸಿದರು. ಅನಂತ ಹೆಗಡೆ ಅಶೀಸರ, ಬಿ.ಎಚ್. ರಾಘವೇಂದ್ರ, ನಾರಾಯಣ ಹೆಗಡೆ ಗಡಿಕೈ ಇತರರು ಇದ್ದರು.

ಶಿರಸಿ
ಆಮ
ಮತ್ತು
ಜಾಗ್ರ
ಹಿನ್ನೆ
ಸೊಲ
ಪುಜ
ಎಂದು
ಹೆಗಡೆ
ನಾ
ಮಾತನ
ಹೊಸ
ಬಗ್ಗೆ
ವಿಜ್ಞಾನ
ಯುಗದ
ಸಮ್ಮೇ
ಎಂದರು

# ಕೃಷಿಕರೇ, ಕೆರೆ–ಪುಣ್ಯತೀರ್ಥಗಳನ್ನು ರಕ್ಷಿಸಿ: ಸ್ವರ್ಣವಲ್ಲೀಶ್ರೀ ಕರೆ



ಶಿರಸಿ, ಮಾ.16: ಮಲೆನಾಡಿನ ಕೆರೆಗಳ ಸಂರಕ್ಷಣೆ ಕುರಿತು ಸೋಂದಾದಲ್ಲಿ ಮಾ.15ರಂದು ನಡೆದ ರಾಜ್ಯಮಟ್ಟದ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನ ಅವರು ಮಾತನಾಡಿದರು. "ಕೆರೆಗಳು ಜಲಪಾತ್ರೆಗಳು, ತೀರ್ಥ ಕೆರೆಗಳನ್ನು ಮುಚ್ಚದಿರಿ, ಕೃಷಿಗೆ ನೀರೇ ಜೀವಾಳ. ನಮ್ಮ ಹಳ್ಳ ಕೆರೆಗಳನ್ನು ಉಳಿಸಿಕೊಳ್ಳಲು ರೈತರೇ ಮುಂದಾಗಬೇಕು" ಎಂದು ಕರೆ ನೀಡಿದರು. "ಸೋಂದಾ ಜಾಗೃತ ವೇದಿಕೆಯಿಂದ ನಡೆದ ಕೆರೆಗಳ ರಕ್ಷಣೆ ಕಾರ್ಯವನ್ನು ಸ್ವರ್ಣವಲ್ಲೀ ಶ್ರೀ ಪ್ರಸ್ತಾಪಿಸಿದರು. ಕೃಷಿ ಜಯಂತಿಯಲ್ಲಿ ಕೆರೆಗಳ ಉಳಿವಿಗೆ ಚರ್ಚೆಮಾಡಿಲಿದ್ದೇವೆ. ಭಾರತೀಯ ವಿಜ್ಞಾನ ಸಂಸ್ಥೆಯವರು ನಡೆಸಲಿರುವ ಕೆರೆ ಸಮ್ಮೇಳನ ಶಿರಸಿಯಲ್ಲಿ ನಡೆಯುತ್ತಿರುವದು ಸ್ವಾಗತಾರ್ಹ" ಎಂದರು.

ಇದೇ ಸಂದರ್ಭದಲ್ಲಿ ಮುಂಡಿಗೆ ಕೆರೆ ಪಕ್ಷಿಧಾಮ ಪ್ರಸ್ತಾವನೆ –ಅಧ್ಯಯನ ವರದಿಯನ್ನು ವೃಕ್ಷ ಲಕ್ಷ ಅಂದೋಲನ ಪೂಜ್ಯ ಸ್ವರ್ಣವಲ್ಲೀ ಶ್ರೀಗಳಿಗೆ ಸಲ್ಲಿಸಿತು. ಬಾಲಚಂದ್ರ ಸಾಯಿಮನೆ, ಶ್ರೀಕಾಂತ ಗುನಗಾ, ಶ್ರೀಧರ ಭಟ್ ಮುಂತಾದವರು ಈ ಅಧ್ಯಯನ ವರದಿ ತಯಾರಿಸಿಕೊಟ್ಟಿದ್ದಾರೆ.

ಸಮಾರೋಪದಲ್ಲಿ ಮಣಿಪಾಲ ಎಂಜಿನೀಯರಿಂಗ್ ಕಾಲೇಜಿನ ಪ್ರಾಧ್ಯಾಪಕ ಡಾ॥ ನಾರಾಯಣ ಶೆಣೈ, ಭಾರತೀಯ ವಿಜ್ಞಾನ ಸಂಸ್ಥೆಯ ಡಾ॥ ಟಿ.ವಿ. ರಾಮಚಂದ್ರ, ಹಿರಿಯ ಸಾಮಾಜಿಕ ಕಾರ್ಯಕರ್ತ ಮಂಗೇಶ್ ಭೇಂಡೆ ಬೆಂಗಳೂರು ಹಾಗೂ ಕೆರೆ ಅಭಿವೃದ್ಧಿ ಸಂಘಗಳ ರಾಜ್ಯ ಒಕ್ಕೂಟದ ಅಧ್ಯಕ್ಷ ಪ್ರೇಮಕುಮಾರ್ ಗೌಡ, ಶಿಕಾರಿಪುರ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡರು. ವೃಕ್ಷ ಲಕ್ಷ ಆಂದೋಲನದ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಕಾರ್ಯಾಗಾರದ ನಿರ್ಣಯಗಳನ್ನು ಮಂಡಿಸಿದರು. ಸ್ವರ್ಣವಲ್ಲೀ ಕೃಷಿ ಪ್ರತಿಷ್ಠಾನದ ಆರ್. ಎನ್. ಹೆಗಡೆ, ಉಳ್ಳಿಕೊಪ್ಪ ಅವರು ಧನ್ಯವಾದ ಸಲ್ಲಿಸಿದರು. ಗ್ರಾಮಾಭ್ಯುದಯದ ಶಾಂತಾರಾಂ ಸಿದ್ಧಿ ನಿರ್ವಹಿಸಿದರು. ಅಗಸಾಲ ಬೊಮ್ಮನಳ್ಳಿ ಗ್ರಾಮ ಅರಣ್ಯ ಸಮಿತಿಯ ವಿಶ್ವನಾಥ, ಸಸ್ಯ ಲೋಕದ ಮಹಾಬಲೇಶ್ವರ ಗುಮ್ಮಾನಿ, ಸೋಂದಾ ಜಾಗೃತ ವೇದಿಕೆಯ ರತ್ನಾಕರ ವ್ಯವಸ್ಥೆಯಲ್ಲಿ ಇದ್ದರು.

ಕಾರ್ಯಾಗಾರದ ವಿವಿಧ ಗೋಷ್ಠಿಗಳಲ್ಲಿ ಕುವೆಂಪು ವಿಶ್ವವಿದ್ಯಾನಿಲಯದ ಡಾ॥ ವಿನಾಯಕ ಗ್ರಾಮಭಾರತಿ ಸಂಸ್ಥೆಯ ರವಿ ಹನಿಯ, ಹೊಸನಗರ, ಗ್ರಾಮಾಂತರ ವಿಜ್ಞಾನ ಕೇಂದ್ರದ ಕೆ. ವೆಂಕಟೇಶ ಸಾಗರ, ಪ್ರೋ. ಸುಭಾಸ್ ಚಂದ್ರನ್, ಪರಿಸರ ವಿಜ್ಞಾನ ಕೇಂದ್ರದ ಪಿ.ಆರ್.ಭಟ್ ಮನು ವಿಕಾಸದ ಗಣಪತಿ, ಕೆರೆ ಅಭಿವೃದ್ಧಿ ಸಂಘದ ಶಿವಾನಂದ ಭಟ್ ಸಣ್ಣಕೆರೆ ಬೆಂಗಳೆಯ ವೆಂಕಟೇಶ, ನಂದೊಳ್ಳಿ ಪಂಚಾಯತ ಅಧ್ಯಕ್ಷ ಟಿ.ಆರ್.ಹೆಗಡೆ, ಪರಿಸರ ವರ್ಧಿನಿಯ ರಮೇಶ, ಬನವಾಸಿಯ ರಘುನಂದನ ಭಟ್ ಮುಂತಾದವರು ವಿಷಯ ಮಂಡಿಸಿದರು.

ನದೀಮೂಲ ಉಳಿಸಿ ಯೋಜನೆಯ ಭಾಗವಾಗಿ ಶರಾವತಿ ನದೀಮೂಲ, ಅಂಬುತೀರ್ಥ, ಕುಮಧ್ವತಿ ವರದಾನದೀ ಮೂಲಗಳಲ್ಲಿ ಕೈಗೊಂಡ ತೀರ್ಥಗಳ ರಕ್ಷಣೆ ವರದಹಳ್ಳಿ ತೀರ್ಥ ರಕ್ಷಣೆ ಮುಂತಾದ ಕಾರ್ಯಕ್ರಮಗಳ ಅನುಭವ ಮಂಡಿತವಾಯಿತು. ಶ್ರೀ ಸ್ವರ್ಣವಲ್ಲಿ ಸಸ್ಯ ಲೋಕದ ಕೆರೆ ನಿರ್ಮಾಣ ಸ್ಥಳಕ್ಕೆ ಪರಿಸರ ತಜ್ಞರು ಕಾರ್ಯಾಗಾರದ ಆರಂಭದಲ್ಲಿ ಭೇಟಿ ನೀಡಿದರು.

ಬೆಂಗಳೂರು ಚಿಕ್ಕಮಗಳೂರು, ಉಡುಪಿ, ಶಿವಮೊಗ್ಗಾ, ಹಾವೇರಿ ಧಾರವಾಡ ಉ.ಕ. ಜಿಲ್ಲೆಗಳ 72 ಪ್ರತಿನಿಧಿಗಳು ಕಾರ್ಯಾಗಾರದಲ್ಲಿ ಪಾಲ್ಗೊಂಡರು.

*ನಿರ್ಣಯಗಳು:*

1.ರಾಜ್ಯದ ಮಲೆನಾಡಿನ ಕೆರೆಗಳ ನಿರ್ವಹಣೆ ಸುಸ್ಥಿರ ಅಭಿವೃದ್ಧಿ, ರಕ್ಷಣೆಗೆ ಪ್ರತ್ಯೇಕ ನೀತಿ ರೂಪಿಸಬೇಕು

2.ಮಲೆನಾಡಿನ ಕೆರೆಗಳ ರಕ್ಷಣೆ, ಜೀರ್ಣೋದ್ಧಾರ ಎಂದರೆ ಕೇವಲ ಹೂಳು ತೆಗೆದರೆ ಸಾಲದು ಜಲಾನಯನದ ಸಮಗ್ರ ದೃಷ್ಟಿಯಿಂದ ಕೆರೆಗಳ ರಕ್ಷಣೆ ಕಾರ್ಯಕ್ರಮ ರೂಪಿಸಬೇಕು. ಕೆರೆಗಳ ಸುತ್ತಲ ಸ್ವಾಭಾವಿಕ ಸಸ್ಯ, ಜೀವ ವೈವಿಧ್ಯ ರಕ್ಷಣೆಗೆ ಮಹತ್ವ ನೀಡಬೇಕು ಎಂದು ಪರಿಸರ ವಿಜ್ಞಾನಿಗಳು ಅಭಿಪ್ರಾಯ ಪಟ್ಟಿದ್ದಾರೆ.

3.ಕೆರೆಗಳ ಪುನಃರುಜ್ಜೀವನದ ಯಶೋಗಾಥೆಗಳ ದಾಖಲೆ ಆಗಬೇಕು. ಕೆರೆ ಪರಿಸ್ಥಿತಿ ಸಮೀಕ್ಷೆ ಅವಶ್ಯಬೇಕು ಎಂದು ಕಾರ್ಯಾಗಾರ ಅಭಿಪ್ರಾಯ ನೀಡಿದೆ.

4.ದೇವಾಲಯ ತೀರ್ಥ– ಕೆರೆಗಳ ರಕ್ಷಣೆಗೆ ಆಯಾ ದೇವಸ್ಥಾನ ಸಮಿತಿಗಳು ಕಾಳಜಿ ವಹಿಸಬೇಕು ಎಂದು ಕಾರ್ಯಾಗಾರ ಕರೆ ನೀಡಿದೆ.

5.ಕೆರೆಗಳು ಮಾಲಿನ್ಯವಾಗುವುದನ್ನು ತಪ್ಪಿಸಲು ನಗರಸಭೆಗಳು, ಗ್ರಾಮ ಪಂಚಾಯತಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳು ನಿಗಾ ವಹಿಸಬೇಕು

6.ಕೆರೆಗಳ ಅಭಿವೃದ್ಧಿಗಾಗಿ ರಾಜ್ಯ ಸರಕಾರ ರಚಿಸಿರುವ ಕೆರೆ ಅಭಿವೃದ್ಧಿ ಸಂಘಗಳ ಪುನಃಶ್ಚೇತನ ಯೋಜನೆ ಜಾರಿಮಾಡಬೇಕು ಎಂದು ಕಾರ್ಯಾಗಾರ ಮನವಿ ಮಾಡಿದೆ.

7.ಮಲೆನಾಡಿನ ಜೌಗು ಪ್ರದೇಶ, ಕೆರೆಗಳ ಸಂರಕ್ಷಣೆ ಕುರಿತ ದೇಶಮಟ್ಟದ ಸಮ್ಮೇಳನವನ್ನು ನವೆಂಬರ್ 2014 ರಲ್ಲಿ ಶಿರಸಿಯಲ್ಲಿ ಏರ್ಪಡಿಸಬೇಕು. ಶ್ರೀ ಸ್ವರ್ಣವಲ್ಲೀ ಶ್ರೀಗಳು ಈ ಸಮ್ಮೇಳನದ ಗೌರವಾಧ್ಯಕ್ಷರಾಗಿರಬೇಕು ಎಂದು ಮನವಿಮಾಡಲಾಯಿತು.

ಇತರೇ ನಿರ್ಮಾಣ ಕಾರ್ಮಿಕರಿಗೆ ಹಮ್ಮಿಕೊಂಡಿದ್ದ ಕಾನೂನು ಅರಿವು -ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಿವಿಲ್ ನ್ಯಾಯಾಧೀಶ ಭಾಮಿನಿ ಮಾತನಾಡಿ ಸಂಘದ ನಾಗೇಶ ಪಟಗಾರ ಉಪಸ್ಥಿತರಿದ್ದರು.

ನಾಗೇಶ ಕೆ.ಭಾಗ್ವತ್ ನಿರೂಪಿಸಿದರು. ಇದೇ ಸಂದರ್ಭದಲ್ಲಿ ಕಾರ್ಮಿಕರ ಗುರುತಿನ ಚೀಟಿ ವಿತರಿಸಲಾಯಿತು.



ಯಲ್ಲಾಪುರ: ಕಾರ್ಮಿಕರಿಗೆ ಹಮ್ಮಿಕೊಂಡಿದ್ದ ಕಾನೂನು ಅರಿವು -ನೆರವು ಕಾರ್ಯಕ್ರಮವನ್ನು ಹಿರಿಯ ಸಿವಿಲ್ ನ್ಯಾಯಾಧೀಶ ಜಗದೀಶ್ವರ ಎಂ. ಉದ್ಘಾಟಿಸಿದರು.

**ಕೆರೆ ಸಂರಕ್ಷಣೆ ಕಾರ್ಯಾಗಾರ**

# ಪುಣ್ಯತೀರ್ಥಗಳಂತೆ ಕೆರೆಗಳನ್ನು ರಕ್ಷಿಸಿ

## ■ ಶಿರಸಿಯಲ್ಲಿ ಕೆರೆ ಸಮ್ಮೇಳನ ಸ್ವಾಗತಾರ್ಹ ■ ಹಳ್ಳ-ಕೊಳ್ಳಗಳ ರಕ್ಷಣೆಗೆ ರೈತರೂ ಮುಂದಾಗಲಿ: ಸ್ವರ್ಣವಲ್ಲೀ ಶ್ರೀ

ಶಿರಸಿ: ಕೆರೆಗಳು ಜಲಪಾತ್ರೆಗಳು. ಇವುಗಳನ್ನು ಪುಣ್ಯ ತೀರ್ಥಕ್ಷೇತ್ರಗಳೆಂದು ಪರಿಗಣಿಸಿ ಸಂರಕ್ಷಣೆ ಮಾಡಬೇಕು. ಯಾವುದೇ ಕಾರಣಕ್ಕೂ ಕೆರೆಗಳನ್ನು ಮುಚ್ಚಬಾರದು. ನಮ್ಮ ಹಳ್ಳ ಕೆರೆಗಳನ್ನು ಉಳಿಸಿಕೊಳ್ಳಲು ರೈತರೂ ಮುಂದಾಗಬೇಕು ಎಂದು ಸೋಂದಾ ಸ್ವರ್ಣವಲ್ಲೀ ಮಠಾಧೀಶ ಗಂಗಾಧರೇಂದ್ರ ಸರಸ್ವತೀ ಶ್ರೀಗಳು ಕರೆ ನೀಡಿದರು.


ಮಲೆನಾಡಿನ ಕೆರೆಗಳ ಸಂರಕ್ಷಣೆ ಕುರಿತು ಸೋಂದಾದಲ್ಲಿ ನಡೆದ ರಾಜ್ಯಮಟ್ಟದ ಕಾರ್ಯಾಗಾರದ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಸೋಂದಾ ಜಾಗೃತ ವೇದಿಕೆಯಿಂದ ನಡೆದ ಕೆರೆಗಳ ರಕ್ಷಣೆ ಕಾರ್ಯ ಪ್ರಸ್ತಾಪಿಸಿದ ಶ್ರೀಗಳು, ಮೇನಲ್ಲಿ ನಡೆಯುವ ಕೃಷಿ ಜಯಂತಿಯಲ್ಲಿ ಕೆರೆಗಳ ಉಳಿವಿಗೆ ಚರ್ಚೆ ಮಾಡಲಿದ್ದೇವೆ. ಭಾರತೀಯ ವಿಜ್ಞಾನ ಸಂಸ್ಥೆಯವರು ನಡೆಸಲಿರುವ ಕೆರೆ ಸಮ್ಮೇಳನ ಶಿರಸಿಯಲ್ಲಿ ನಡೆಯುತ್ತಿರುವದು ಸ್ವಾಗತಾರ್ಹ ಎಂದರು.

ಪರಿಸರ ಕಾರ್ಯಕರ್ತ ಬಾಲಚಂದ್ರ ಸಾಯಿಮನೆ, ಶ್ರೀಕಾಂತ ಗುನಗಾ, ಶ್ರೀಧರ ಭಟ್ ಮುಂತಾದವರು ಸಿದ್ಧಗೊಳಿಸಿದ ಮುಂಡಿಗೆಕೆರೆ ಪಕ್ಷಿಧಾಮ ಪ್ರಸ್ತಾವನೆ-ಅಧ್ಯಯನ ವರದಿಯನ್ನು ಸ್ವರ್ಣವಲ್ಲೀ ಶ್ರೀಗಳಿಗೆ ಸಲ್ಲಿಸಲಾಯಿತು.

ಮಣಿಪಾಲ ಎಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕ ಡಾ। ನಾರಾಯಣ ಶೆಣೈ, ಭಾರತೀಯ ವಿಜ್ಞಾನ ಸಂಸ್ಥೆಯ ಡಾ। ಟಿ.ವಿ.ರಾಮಚಂದ್ರ, ಹಿರಿಯ ಸಾಮಾಜಿಕ ಕಾರ್ಯಕರ್ತ ಮಂಗೇಶ್ ಭೆಂಡೆ ಹಾಗೂ ಕೆರೆ ಅಭಿವೃದ್ಧಿ ಸಂಘಗಳ ರಾಜ್ಯ ಒಕ್ಕೂಟದ ಅಧ್ಯಕ್ಷ ಪ್ರೇಮಕುಮಾರ್ ಗೌಡ ಶಿಕಾರಿಪುರ, ವೃಕ್ಷ ಲಕ್ಷ ಆಂದೋಲನದ ಅಧ್ಯಕ್ಷ ಅನಂತ ಅಶೀಸರ, ಅಗಸಾಲ-ಬೊಮ್ಮನಳ್ಳಿ ಗ್ರಾಮ ಅರಣ್ಯ ಸಮಿತಿಯ ವಿಶ್ವನಾಥ ಹೆಗಡೆ, ಸಸ್ಯ ಲೋಕದ ಮಹಾಬಲೇಶ್ವರ ಗುಮ್ಮಾನಿ, ಸೋಂದಾ ಜಾಗೃತ ವೇದಿಕೆಯ ರತ್ನಾಕರ ಹೆಗಡೆ ಪಾಲ್ಗೊಂಡರು.

ಕುವೆಂಪು ವಿಶ್ವವಿದ್ಯಾನಿಲಯದ ಡಾ। ವಿನಾಯಕ, ಗ್ರಾಮಭಾರತಿ ಸಂಸ್ಥೆಯ ರವಿ ಹನಿಯ, ಗ್ರಾಮಾಂತರ ವಿಜ್ಞಾನ ಕೇಂದ್ರದ ಕೆ.ವೆಂಕಟೇಶ ಸಾಗರ, ಸುಭಾಸ್ ಚಂದ್ರನ್, ಪರಿಸರ ವಿಜ್ಞಾನ ಕೇಂದ್ರದ ಪಿ.ಆರ್.ಭಟ್, ಮನು ವಿಕಾಸದ ಗಣಪತಿ ಭಟ್ಟ, ಕೆರೆ ಅಭಿವೃದ್ಧಿ ಸಂಘದ ಶಿವಾನಂದ ಭಟ್ ಸಣ್ಣಕೆರೆ, ಬೆಂಗಳೆಯ ವೆಂಕಟೇಶ, ನಂದೊಳ್ಳಿ ಪಂಚಾಯತ ಅಧ್ಯಕ್ಷ ಟಿ.ಆರ್. ಹೆಗಡೆ, ಪರಿಸರ ವರ್ಧಿನಿಯ ಹಳೇಕಾನಗೋಡ ರಮೇಶ, ನರೂರು ರಘುನಂದನ ಭಟ್ ಮುಂತಾದವರು ಗೋಷ್ಠಿಗಳಲ್ಲಿ ವಿಷಯ ಮಂಡಿಸಿದರು. ಶಾಂತಾರಾಂ ಸಿದ್ಧಿ ನಿರ್ವಹಿಸಿದರು. ಆರ್. ಎನ್.ಹೆಗಡೆ ಉಳ್ಳಿಕೊಪ್ಪ ವಂದಿಸಿದರು.



ಶಿರಸಿ: ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತಿ ಶ್ರೀಗಳಿಗೆ ಮುಂಡಿಕೆರೆ ಅಧ್ಯಯನ ವರದಿ ಸಲ್ಲಿಸಲಾಯಿತು.

## ಕಣ್ಮರೆಯಾಗುತ್ತಿವೆ ಕೆರೆ ಸಂರಕ್ಷಣಾ ವಿಧಾನಗಳು

ಶಿರಸಿ: ನಮ್ಮಲ್ಲಿ ಸುಮಾರು 71 ಕೆರೆ ಸಂರಕ್ಷಣಾ ವಿಧಾನಗಳು ಇದ್ದವು. ಇಂದು ಅವೆಲ್ಲವೂ ಕಣ್ಮರೆಯಾಗಿವೆ ಎಂದು ಪ್ರೊ। ನಾರಾಯಣ ಶೆಣೈ ಹೇಳಿದರು.

ಸ್ವರ್ಣವಲ್ಲೀ ಮಠದ ಸುಧರ್ಮ ಸಭಾಂಗಣದಲ್ಲಿ ಶನಿವಾರ ನಡೆದ ಕೆರೆ ಸಂರಕ್ಷಣೆ ಕುರಿತ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು. 1960 ರಲ್ಲಿ ನಮ್ಮ ದೇಶದಲ್ಲಿ ಜಲಕ್ಷಾಮಗಳು ಇರಲಿಲ್ಲ. ನಲ್ಲಿಗಳ ಮುಖಾಂತರ ನೀರು ಪೂರೈಸುವ ವಿಧಾನ ಪ್ರಾರಂಭವಾದ ನಂತರ ಕೆರೆಗಳ ಇನ್ನಿತರ ವಿಧಾನಗಳ ಅವನತಿ ಪ್ರಾರಂಭವಾಯಿತು. ನಮ್ಮ ದೇಶದಲ್ಲಿ ಶೇ.30 ರಿಂದ 40 ರಷ ಕೆರೆಗಳನ್ನು ಸಾಮಾನ್ಯ ಜನರು ನಿರ್ಮಿಸಿದ್ದಾರೆ ಎಂದರು.

ವಿಜ್ಞಾನಿ ಟಿ.ವಿ.ರಾಮಚಂದ್ರ, ನಮ್ಮ ರಾಜ್ಯದಲ್ಲಿ ಸುಮಾ 40 ಸಾವಿರ ಕೆರೆಗಳಿವೆ. ನೀರಿನ ಕ್ಷಾಮವನ್ನು ನೀಗಿಸಲು ಅನ ವಿಧಾನಗಳು ಇಲ್ಲಿವೆ. ತೆಲಗು ಗಂಗಾ ಯೋಜನೆ ನಿರೀ ಯಶಸ್ಸನ್ನು ಪಡೆದಿಲ್ಲ. ಅನೇಕ ದೊಡ್ಡ ಯೋಜನೆಗಳಿಂದ ಚ ಯೋಜನೆಗಳು ಕುಂಠಿತಗೊಂಡಿವೆ. ದೇಶ ಮಟ್ಟದ ಕೆರೆ ಸಮ್ಮೇಳ ನಡೆಸುವ ಉದ್ದೇಶ ಹೊಂದಿದ್ದೇವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ವೃಕ್ಷಲಕ್ಷ ಆಂದೋಲನದ ಅನಂತ ಹೆಗ ಅಶೀಸರ, ಕೆರೆ ಸಮ್ಮೇಳನದ ಪೂರ್ವದಲ್ಲಿ ಕೆರೆಗಳ ಅಭಿಯಾನ ನಡೆಸಿ ಅವುಗಳ ಅಧ್ಯಯನ ಮಾಹಿತಿ ಸಂಗ್ರಹಿಸಲಾಗುತ್ತದ ಎಂದರು. ಸಾಗರದ ಸೇವಾಸಾಗರದ ಬಿ.ಎಚ್.ರಾಘವೇಂದ್ರ, ನಾರಾಯಣ ಹೆಗಡೆ ಗಡಿಕೈ ಇದ್ದರು.

# ಕೆರೆಗಳ ಸಂರಕ್ಷಣೆಗೆ ರೈತರೇ ಮುಂದಾಗಲಿ: ಸ್ವರ್ಣವಲ್ಲೀ ಶ್ರೀ


ವಿಕ ಚಿತ್ರಲೋಕ

**ಸೋಂದಾದಲ್ಲಿ ನಡೆದ ಮಲೆನಾಡಿನ ಕೆರೆಗಳ ಸಂರಕ್ಷಣೆ ಕುರಿತು ರಾಜ್ಯಮಟ್ಟದ ಕಾರ್ಯಾಗಾರದಲ್ಲಿ ಮುಂಡಿಗೆ ಕೆರೆ ಪಕ್ಷಿಧಾಮ ಪ್ರಸ್ತಾವನೆ - ಅಧ್ಯಯನ ವರದಿಯನ್ನು ವೃಕ್ಷ ಲಕ್ಷ ಆಂದೋಲನದಿಂದ ಸ್ವರ್ಣವಲ್ಲೀ ಶ್ರೀಗಳಿಗೆ ಸಲ್ಲಿಸಲಾಯಿತು.**

■ **ವಿಕ ಸುದ್ದಿಲೋಕ,** ಶಿರಸಿ

ಕೆರೆಗಳು ಜಲಪಾತ್ರೆಗಳು, ತೀರ್ಥಗಳನ್ನು ಕೆರೆಗಳನ್ನು ಮುಚ್ಚದಿರಿ, ಕೃಷಿಗೆ ನೀರೇ ಜೀವಾಳವಾಗಿದ್ದು ನಮ್ಮ ಹಳ್ಳ ಕೆರೆಗಳನ್ನು ಉಳಿಸಿಕೊಳ್ಳಲು ರೈತರೇ ಮುಂದಾಗಬೇಕು ಎಂದು ಸೋಂದಾ ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಹೇಳಿದರು.

ಮಲೆನಾಡಿನ ಕೆರೆಗಳ ಸಂರಕ್ಷಣೆ ಕುರಿತು ಸೋಂದಾದಲ್ಲಿ ನಡೆದ ರಾಜ್ಯ ಮಟ್ಟದ ಕಾರ್ಯಾಗಾರದ ಸಮಾರೋಪದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು. ಸೋಂದಾ ಜಾಗೃತ ವೇದಿಕೆಯಿಂದ ನಡೆದ ಕೆರೆಗಳ ರಕ್ಷಣೆ ಕಾರ್ಯವನ್ನು ಸ್ವರ್ಣವಲ್ಲೀ ಶ್ರೀ ಪ್ರಸ್ತಾಪಿಸಿದರು. ಕೃಷಿ ಜಯಂತಿಯಲ್ಲಿ ಕೆರೆಗಳ ಉಳಿವಿಗೆ ಚರ್ಚೆಮಾಡಿಲಿದ್ದೇವೆ. ಭಾರತೀಯ ವಿಜ್ಞಾನ ಸಂಸ್ಥೆಯವರು ನಡೆಸಲಿರುವ ಕೆರೆ ಸಮ್ಮೇಳನ ಶಿರಸಿಯಲ್ಲಿ ನಡೆಯುತ್ತಿರುವದು ಸ್ವಾಗತಾರ್ಹ ಎಂದರು.

ಇದೇ ಸಂದರ್ಭದಲ್ಲಿ ಮುಂಡಿಗೆ ಕೆರೆ ಪಕ್ಷಿಧಾಮ ಪ್ರಸ್ತಾವನೆ - ಅಧ್ಯಯನ ವರದಿಯನ್ನು ವೃಕ್ಷ ಲಕ್ಷ ಆಂದೋಲನ ಸ್ವರ್ಣವಲ್ಲೀ ಶ್ರೀಗಳಿಗೆ ಸಲ್ಲಿಸಿತು. ಬಾಲಚಂದ್ರ ಸಾಯಿಮನೆ, ಶ್ರೀಕಾಂತ ಗುನಗಾ, ಶ್ರೀಧರ ಭಟ್ ಮುಂತಾದವರು ಈ ಅಧ್ಯಯನ ವರದಿ ತಯಾರಿಸಿದ್ದರು.

ಸಮಾರೋಪದಲ್ಲಿ ಮಣಿಪಾಲ ಎಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕ ನಾರಾಯಣ ಶೆಣೈ, ಭಾರತೀಯ ವಿಜ್ಞಾನ ಸಂಸ್ಥೆಯ ಟಿ.ವಿ. ರಾಮಚಂದ್ರ, ಹಿರಿಯ ಸಾಮಾಜಿಕ ಕಾರ್ಯಕರ್ತ ಮಂಗೇಶ್ ಭೇಂಡೆ ಬೆಂಗಳೂರು, ಕೆರೆ ಅಭಿವೃದ್ಧಿ ಸಂಘಗಳ ರಾಜ್ಯ ಒಕ್ಕೂಟದ ಅಧ್ಯಕ್ಷ ಪ್ರೇಮಕುಮಾರ್ ಗೌಡ, ಶಿಕಾರಿಪುರ ಅತಿಥಿಗಳಾಗಿ ಪಾಲ್ಗೊಂಡರು. ವೃಕ್ಷ ಲಕ್ಷ ಆಂದೋಲನದ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಕಾರ್ಯಾಗಾರದ ನಿರ್ಣಯ ಮಂಡಿಸಿದರು. ಸ್ವರ್ಣವಲ್ಲೀ ಕೃಷಿ ಪ್ರತಿಷ್ಠಾನದ ಆರ್. ಎನ್. ಹೆಗಡೆ, ಉಳ್ಳಿಕೊಪ್ಪ ವಂದಿಸಿದರು. ಗ್ರಾಮಾಭ್ಯುದಯದ ಶಾಂತಾ ರಾಮ ಸಿದ್ದಿ ನಿರೂಪಿಸಿದರು. ಅಗಸಾಲ ಬೊಮ್ಮನಳ್ಳಿ ಗ್ರಾಮ ಅರಣ್ಯ ಸಮಿತಿಯ ವಿಶ್ವನಾಥ, ಸಸ್ಯ ಲೋಕದ ಮಹಾಬಲೇಶ್ವರ ಗುಮ್ಮಾನಿ, ಸೋಂದಾ ಜಾಗೃತ ವೇದಿಕೆಯ ರತ್ನಾಕರ ವಿವಿಧ ಜವಾಬ್ದಾರಿ ನಿರ್ವಹಿಸಿದರು.

ಕಾರ್ಯಾಗಾರದ ವಿವಿಧ ಗೋಷ್ಠಿಗಳಲ್ಲಿ... ಕುವೆಂಪು ವಿಶ್ವವಿದ್ಯಾನಿಲಯದ ವಿನಾಯಕ, ಗ್ರಾಮಭಾರತಿ ಸಂಸ್ಥೆಯ ರವಿ ಹನಿಯ, ಹೊಸನಗರ, ಗ್ರಾಮಾಂತರ ವಿಜ್ಞಾನ ಕೇಂದ್ರದ ಕೆ. ವೆಂಕಟೇಶ ಸಾಗರ, ಪ್ರೋ. ಸುಭಾಸ್ ಚಂದ್ರನ್, ಪರಿಸರ ವಿಜ್ಞಾನ ಕೇಂದ್ರದ ಪಿ. ಆರ್. ಭಟ್, ಮನು ವಿಕಾಸದ ಗಣಪತಿ, ಕೆರೆ ಅಭಿವೃದ್ಧಿ ಸಂಘದ ಶಿವಾನಂದ ಭಟ್ ಸಣ್ಣಕೆರೆ, ಬೆಂಗಳೆಯ ಶ್ರೀ ವೆಂಕಟೇಶ, ನಂದೊಳ್ಳಿ ಪಂಚಾಯತ ಅಧ್ಯಕ್ಷ ಟಿ. ಆರ್. ಹೆಗಡೆ, ಪರಿಸರ ವರ್ಧಿನಿಯ ರಮೇಶ, ಬನವಾಸಿಯ ರಘುನಂದನ ಭಟ್ ಮುಂತಾದವರು ವಿಷಯ ಮಂಡಿಸಿದರು.

ನದೀಮೂಲ ಉಳಿಸಿ ಯೋಜನೆಯ ಭಾಗವಾಗಿ ಶರಾವತಿ ನದೀಮೂಲ, ಅಂಬುತೀರ್ಥ, ಕುಮುದ್ವತಿ ವರದಾನದೀ ಮೂಲಗಳಲ್ಲಿ ಕೈಗೊಂಡ ತೀರ್ಥಗಳ ರಕ್ಷಣೆ ವರದಹಳ್ಳಿ ತೀರ್ಥ ರಕ್ಷಣೆ ಮುಂತಾದ ಕಾರ್ಯಕ್ರಮಗಳ ಅನುಭವ ಮಂಡಿತವಾಯಿತು.

ಸ್ವರ್ಣವಲ್ಲಿ ಸಸ್ಯ ಲೋಕದ ಕೆರೆ ನಿರ್ಮಾಣ ಸ್ಥಳಕ್ಕೆ ಪರಿಸರ ತಜ್ಞರು ಕಾರ್ಯಾಗಾರದ ಆರಂಭದಲ್ಲಿ ಭೇಟಿ ನೀಡಿದರು. ಬೆಂಗಳೂರು ಚಿಕ್ಕಮಗಳೂರು, ಉಡುಪಿ, ಶಿವಮೊಗ್ಗಾ, ಹಾವೇರಿ ಧಾರವಾಡ ಉ.ಕ. ಜಿಲ್ಲೆಗಳ 72 ಪ್ರತಿನಿಧಿಗಳು ಕಾರ್ಯಾಗಾರದಲ್ಲಿ ಪಾಲ್ಗೊಂಡರು.

**ಕೆರೆ ಸಂರಕ್ಷಣಾ ನಿರ್ಣಯ..........**

ಮಲೆನಾಡಿನ ಕೆರೆಗಳ ಸಂರಕ್ಷಣೆ ಕುರಿತ ಕಾರ್ಯಾಗಾರದಲ್ಲಿ ಹಲವಾರು ಸಂಘ ಸಂಸ್ಥೆಗಳು, ವಿಜ್ಞಾನ ಸಂಸ್ಥೆಗಳು, ರೈತ ವನವಾಸಿ ಪ್ರತಿನಿಧಿಗಳು ಸೇರಿ ಹಲವು ನಿರ್ಣಯಗಳನ್ನು ಕೈಗೊಂಡರು. ರಾಜ್ಯದ ಮಲೆನಾಡಿನ ಕೆರೆಗಳ ನಿರ್ವಹಣೆ ಸುಸ್ಥಿರ ಅಭಿವೃದ್ಧಿ, ರಕ್ಷಣೆಗೆ ಪ್ರತ್ಯೇಕ ನೀತಿ ರೂಪಿಸಬೇಕು.

ಮಲೆನಾಡಿನ ಕೆರೆಗಳ ರಕ್ಷಣೆ, ಜೀರ್ಣೋದ್ಧಾರ ಎಂದರೆ ಕೇವಲ ಹೂಳು ತೆಗೆದರೆ ಸಾಲದು ಜಲಾನಯನದ ಸಮಗ್ರ ದೃಷ್ಟಿಯಿಂದ ಕೆರೆಗಳ ರಕ್ಷಣೆ ಕಾರ್ಯಕ್ರಮ ರೂಪಿಸಬೇಕು. ಕೆರೆಗಳ ಸುತ್ತಲ ಸ್ವಾಭಾವಿಕ ಸಸ್ಯ, ಜೀವ ವೈವಿಧ್ಯ ರಕ್ಷಣೆಗೆ ಮಹತ್ವ ನೀಡಬೇಕು. ಕೆರೆಗಳ ಪುನಃರುಜ್ಜೀವನದ ಯಶೋಗಾಥೆಗಳ ದಾಖಲೆ ಆಗಬೇಕು. ಕೆರೆ ಪರಿಸ್ಥಿತಿ ಸಮೀಕ್ಷೆ ಅವಶ್ಯಬೇಕು. ದೇವಾಲಯ ತೀರ್ಥ- ಕೆರೆಗಳ ರಕ್ಷಣೆಗೆ ಆಯಾ ದೇವಸ್ಥಾನ ಸಮಿತಿಗಳು ಕಾಳಜಿ ವಹಿಸಬೇಕು ಎಂದು ಕಾರ್ಯಾಗಾರದಲ್ಲಿ ಅಭಿಪ್ರಾಯಪಡಲಾಗಿದೆ.

ಕೆರೆಗಳು ಮಾಲಿನ್ಯವಾಗುವುದನ್ನು ತಪ್ಪಿಸಲು ನಗರಸಭೆಗಳು, ಗ್ರಾಮ ಪಂಚಾಯಿತಿಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳು ನಿಗಾ ವಹಿಸಬೇಕು.

ಕೆರೆಗಳ ಅಭಿವೃದ್ಧಿಗಾಗಿ ರಾಜ್ಯ ಸರಕಾರ ರಚಿಸಿರುವ ಕೆರೆ ಅಭಿವೃದ್ಧಿ ಸಂಘಗಳ ಪುನಃಶ್ಚೇತನ ಯೋಜನೆ ಜಾರಿಮಾಡಬೇಕು.

ಮಲೆನಾಡಿನ ಜೌಗು ಪ್ರದೇಶ, ಕೆರೆಗಳ ಸಂರಕ್ಷಣೆ ಕುರಿತ ದೇಶಮಟ್ಟದ ಸಮ್ಮೇಳನವನ್ನು ನವೆಂಬರ್ 2014 ರಲ್ಲಿ ಶಿರಸಿಯಲ್ಲಿ ಏರ್ಪಡಿಸಬೇಕು. ಸ್ವರ್ಣವಲ್ಲೀ ಶ್ರೀಗಳು ಈ ಸಮ್ಮೇಳನದ ಗೌರವಾಧ್ಯಕ್ಷರಾಗಿರಬೇಕು ಎಂದು ಮನವಿ ಮಾಡಲಾಯಿತು.